## 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿರವರ ನ್ಯಾಯಾಲಯ, ಸಕಲೇಶಪುರ

**ಸಿ.ಸಿ. ನಂ.130/2025**

**ಫಿರ್ಯಾದಿಃ** ಯಸಳೂರು ಪೊಲೀಸ್ ಠಾಣೆ

**– ವಿರುದ್ಧ –**

**ಆರೋಪಿ** ಶ್ರೀ ಕೃಷ್ಣೇ ಗೌಡ

## ದೋಷಾರೋಪಣೆ

ಶ್ರೀಮತಿ ಶ್ರುತಿ ಕೆ.ಎಸ್., 1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ. ದ.ನ್ಯಾ ದಂಡಾಧಿಕಾರಿಗಳಾದ ನಾನು, ಈ ಮೂಲಕ ಆರೋಪಿಯಾ ಅಂದರೆ,

1. ಶ್ರೀ ಕೃಷ್ಣೇಗೌಡ ಡಿ.ಡಿ ಬಿನ್ ಧರ್ಮಪ್ಪ ಡಿ.ಎಸ್, ವಯ್ಯಸ್ಸು 51 ವರ್ಷ, ವಾಸ ಕೊಡ್ಡಕುಂದೂರು , ಕೊಪ್ಪಲು ಗ್ರಾಮ, ಸಕಲೇಶಪುರ ತಾಲ್ಲೂಕು

**ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ ಃ–**

ದಿನಾಂಕಃ03–03–2025 ರಂದು ಚಾ ಸಾ 1 ಧರ್ಮಪ್ಪ ಡಿ.ಎಸ್ ಹಾಗೂ ಚಾ ಸಾ 2 ಕವಿತ ಉಃ ಮಾರಿ ಇವರುಗಳು ದೊಡ್ಡಕುಂದುಂದೂರು ಗ್ರಾಮದಲ್ಲಿ ಮನೆಯಲ್ಲಿರುವಾಗ ಸಂಜೆ 06–45 ಗಂಟೆ ಸಮಯದಲ್ಲಿ ಮೇಲ್ಕಂಡ ಆರೋಪಿಯಾದ ನೀವು ಜಮೀನಿನ ವಿಚಾರದಲ್ಲಿ ಗಲಾಟೆ ಮಾಡುತ್ತಿದ್ದು ಆಗ ಚಾ ಸಾ 1 ರವರು ಬಾಗಿಲು ತೆಗೆದಾಗ ಮೇಲ್ಕಂಡ ಆರೋಪಿಯಾದ ನೀವು ಮಾರಕ ಆಯುಧವಾದ ಕತ್ತಿ ತಂದು ಕಡಿಯಲು ಬಂದಿದ್ದು ನಂತರ ಚಾ ಸಾ 1 ಹಾಗೂ ಚಾ ಸಾ 2 ರವರು ಹಿಂಭಾಗಿಲಿನಿಂದ ಕಣದ ಕಡೆ ಓಡಿ ಹೋಗುವಾಗ ಆರೋಪಿಯಾದ ನೀವು ನಿಮ್ಮ ಬಾಬ್ತು ಕೆಎ 04 ಎಂ ಎ 7204 ಸಂಖ್ಯೆಯ ಆಲ್ಟೋ ಕಾರಿನಲ್ಲಿ ವೆಂಕಟೇಶ್‌ರವರ ಮನೆ ಮುಂದೆ ರಸ್ತೆಯಲ್ಲಿ ಅಡ್ಡಗಟ್ಟಿ ತಡೆದಿದ್ದು , ಆ ಮೂಲಕ ಭಾ.ನ್ಯಾ ಸಂಹಿತೆ ಕಲಂ.126(2) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ?

2. ಎರಡನೆಯದಾಗಿ ಮೇಲ್ಕಂಡ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭದಲ್ಲಿ ಆರೋಪಿಯಾದ ನೀವು ಚಾ ಸಾ 1 ಮತ್ತು 2 ರವರನ್ನು ತಡೆದು ಹಿಡಿದಿದ್ದೂ ಅಲ್ಲದೇ ಕಾರಿನಲ್ಲಿದ್ದ ಕತ್ತಿ ತಂದು ಹತ್ತಿರ ಬೀಸಿದ್ದು ನಂತರ ಚಾ ಸಾ 2 ರವರು ಚಾ ಸಾ 1 ರವರನ್ನು ಕರೆದುಕೊಂಡು ಜೊತೆ ಕರೆದುಕೊಂಡು ಓಡುವಾಗ ಆರೋಪಿಯಾದ ನೀವು ಪುನಃ ಹಿಂಬಾಲಿಸಿಕೊಂಡು ಬಂದಾಗ ಚಾ ಸಾ 1 ರವರು ಮಾರಕ ಆಯುಧವಾದ ದೊಣ್ಣೆ ಯಿಂದ ಆರೋಪಿಯಾದ ನೀವು ಹಿಡಿದಿದ್ದ ಕತ್ತಿಗೆ ಬಲವಾಗಿ ಹೊಡೆದಾಗ ಕತ್ತಿ ಕೈಯಿಂದ ಹಾರಿ ಬಿದ್ದಿದ್ದು ಚಾ ಸಾ 3 ರವರು ಕತ್ತಿಯನ್ನು ಎತ್ತಿಕೊಂಡಾಗ ಆರೋಪಿಯಾದ ನೀವು ಚಾ ಸಾ 1 ರವರನ್ನು ಕುರಿತು ಈ ದಿನ ಉಳಿದುಕೊಂಡೆ ನಾನು ನಿನಗೆ ಜೀವ ಸಹಿತ ಬಿಡಲ್ಲ ಎಂದು ಕೊಲೆ ಬೆದರಿಕೆ ಹಾಕಿ ಕಾರಿನಲ್ಲಿ ಹೋಗಿದ್ದು, ಆ ಮೂಲಕ ಭಾ.ನ್ಯಾ.ಸಂಹಿತೆ ಕಲಂ.351(2) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ?

**(ಆರೋಪಿಯಾದ ನೀವು ಮೇಲ್ಕಂಡ ಅಪರಾಧಗಳಿಳಿಗೆ ಇದೇ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದು ಎಂದು ನಿರ್ದೇಶಿಸಿರುತ್ತೇನೆ)**

ದಿನಾಂಕಃ 10.06.2026.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಕಲೇಶಪುರ.

1. ಈಗ ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾದ ದೋಷಾರೋಪಣೆಯ ಸಾರಾಂಶವನ್ನು ಕೇಳಿ ತಿಳಿದು ಅರ್ಥ ಮಾಡಿಕೊಂಡಿರುತ್ತೀರಾ?

ಉತ್ತರಃ

2. ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರಾ ? ಅಥವಾ ವಿಚಾರಣೆಯಾಗ ಬಯಸುತ್ತೀರಾ?

ಉತ್ತರಃ

ಮೇಲ್ಕಂಡ ದೋಷಾರೋಪಣೆಯು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕಃ 10.06.2026

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಕಲೇಶಪುರ.

**ಆರೋಪಿಯ ಸಹಿಃ**